ಕೋರ್ಟ್‌ಗಳು-೨, ಎರಡು ವಾಲಿಬಾಲ್ ಕೋರ್ಟ್‌ಗಳು ಕೊಳವೆ ಬಾವಿ ತೋಡುವಿಕೆ, ಡೀಪ್‌ವೆಲ್ ಪಂಪ್, ಡಿಸ್ಟ್ರಿಬ್ಯೂಷನ್ ಪೈಪ್ ಲೈನ್ ಇತರೆ ಕೆಲಸಗಳು ಮುಗಿದಿವೆ.

ಇನ್ನೂ ಬಾಕಿ ಉಳಿದಿರುವ ಕೆಲಸಗಳಿಗೆ ೧೭.೦೦ ಲಕ್ಷ ರೂ. ಗಳು ಬೇಕಾಗಿದ್ದು ಆ ಕೆಲಸ ಪೂರ್ಣಗೊಳ್ಳಬೇಕಾದರೆ ಇನ್ನೂ ಸಮಯ ಬೇಕಾಗುತ್ತದೆ. ಆದರೂ ಅತಿ ಜರೂರಾಗಿ ಕೆಲಸ ಮುಗಿಸಲು ಎಲ್ಲ ಪ್ರಯತ್ನಗಳನ್ನು ಮಾಡಲಾಗುವುದು.

ರಾಜಕೀಯ ಸಂತ್ರಸ್ತರಿಗೆ ರಾಜ್ಯ ಗೌರವಧನ ಮಂಜೂರಾತಿ ಬಗ್ಗೆ

೫೧ (೩೧) ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ರಾಜ್ಯ ಸರ್ಕಾರದವರು ರಾಜ್ಯದಲ್ಲಿ ಎಷ್ಟು ಮಂದಿಗೆ ರಾಜಕೀಯ ಪಾಶಾಸನ ನೀಡುತ್ತಿದ್ದಾರೆ ಹಾಗೂ ಪ್ರತಿ ತಿಂಗಳಿಗೆ ಪ್ರತಿ ಪ್ಯಕ್ಕಿಗೆ ನೀಡುತ್ತಿರುವ ಹಣವೆಷ್ಟು?

ಆ) ಈ ರಾಜಕೀಯ ಪಾಶಾಸನ ಮಂಜೂರ್ಮಾಡುವಲ್ಲಿ ಅನುಸರಿಸುತ್ತಿರುವ ನೀತಿ, ಹಾಗೂ ವಿಧಾನಗಳೇನು?

ಇ) ಕೇಂದ್ರ ಸರ್ಕಾರದವರು ಹಾಗೂ ರಾಜ್ಯ ಸರ್ಕಾರದವರು ರಾಜಕೀಯ ಪಾಶಾಸನ ಕೊಡುತ್ತಿರುವುದರಲ್ಲಿ ಇರುವ ವ್ಯತ್ಯಾಸಕ್ಕೆ ಕಾರಣವೇನು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

ಅ) ರಾಜ್ಯದಲ್ಲಿ ಒಟ್ಟು ೨೧,೫೮೩ ಜನ ಸ್ವಾತಂತ್ರ್ಯ ಯೋಧರು ಪಾಶಾಸನ (ರಾಜ್ಯ ಗೌರವಧನ) ಪಡೆಯುತ್ತಿದ್ದಾರೆ. ಪ್ರತಿ ತಿಂಗಳಿಗೆ ಪ್ರತಿ ಸ್ವಾತಂತ್ರ್ಯ ಯೋಧರಿಗೆ ಅಥವಾ ಸ್ವಾತಂತ್ರ್ಯ ವಿಧವೆಯರಿಗೆ, ಅಥವಾ ಅಪ್ರಾಪ್ತ ವಯಸ್ಕ-ಸ್ವಾತಂತ್ರ್ಯ ಯೋಧರ ಮಕ್ಕಳಿಗೆ ರೂ. ೧೫೦-೦೦ ರಂತೆ ಪಾಶಾಸನವನ್ನು ನೀಡಲಾಗುತ್ತಿದೆ.

ಆ) ಭಾರತ ಸ್ವಾತಂತ್ರ್ಯ ಸಂಗ್ರಾಮದ ನಿಮಿತ್ತ ತುರುಂಗವಾಸ ಅನುಭವಿಸಿದವರು ಹಾಗೂ ಭೂಗತ ಕಾರ್ಯ ನಿರ್ವಹಿಸಿದವರನ್ನು ಸ್ವಾತಂತ್ರ್ಯ ಯೋಧರೆಂದು ಪರಿಗಣಿಸಿ ಅಂತಹವರು ಮಾತ್ರ ಪಾಶಾಸನಕ್ಕೆ (ರಾಜ್ಯ ಗೌರವಧನ) ಅರ್ಹರಾಗಿರುತ್ತಾರೆ.

ಇ) ಕೇಂದ್ರ ಗೌರವಧನ ಮಂಜೂರಾತಿಯ ನಿಯಮಗಳ ಪ್ರಕಾರ ಸ್ವಾತಂತ್ರ್ಯ ಸಂಗ್ರಾಮದ ನಿಮಿತ್ತ ೬ ತಿಂಗಳ ಕಾರಾಗೃಹ ವಾಸ. ಭೂಗತ ಕಾರ್ಯವೆಸಗಿರುವ ಸ್ವಾತಂತ್ರ್ಯ ಯೋಧರುಗಳು ಕೇಂದ್ರ ಸರ್ಕಾರದ ತೀರ್ಮಾನದಂತೆ ತಿಂಗಳಿಗೆ ರೂ. ೫೦೦-೦೦ ಕೇಂದ್ರ ಗೌರವಧನಕ್ಕೆ ಅರ್ಹರಾಗಿರುತ್ತಾರೆ. ಆದರೆ ರಾಜ್ಯ ಗೌರವಧನ ಮಂಜೂರಾತಿ ನಿಯಮದ ಪ್ರಕಾರ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಕನಿಷ್ಟಪಕ್ಷ ಒಂದು ದಿನ ಕಾರಾಗೃಹ ಶಿಕ್ಷೆ ಅನುಭವಿಸಿದ ಸ್ವಾತಂತ್ರ್ಯ ಯೋಧರುಗಳು ರಾಜ್ಯ ಸರ್ಕಾರದ ತೀರ್ಮಾನದಂತೆ ತಿಂಗಳಿಗೆ ರೂ. ೧೫೦-೦೦ ರ ರಾಜ್ಯ ಗೌರವಧನಕ್ಕೆ ಅರ್ಹರಾಗಿರುತ್ತಾರೆ.

ಸಾಂಸ್ಕೃತಿಕ ಚಟುವಟಿಕೆಗಳಲ್ಲಿರುವವರಿಗೆ ಪಾಶಾಸನ ನೀಡುವ ಬಗ್ಗೆ

೫೨ (೩೦) ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ರಾಜ್ಯ ಸರ್ಕಾರದವರು ರಾಜ್ಯದಲ್ಲಿ ಸಾಹಿತ್ಯ, ಸಂಗೀತ, ನಾಟಕ, ನೃತ್ಯ ಜಾನಪದ ಹಾಗೂ ಚಿತ್ರಕಲೆ ಈ ಕ್ಷೇತ್ರಗಳಲ್ಲಿ ದುಡಿದವರಿಗೆ ನೀಡುತ್ತಿರುವ ಪಾಶಾಸನವೆಷ್ಟು?

ಆ) ಈ ಪಾಶಾಸನ ನೀಡುವುದಕ್ಕೆ ಸರ್ಕಾರದವರು ಅನುಸರಿಸುತ್ತಿರುವ ನೀತಿ ಹಾಗೂ ನಿಯಮಗಳೇನು?

ಇ) ಈ ಕ್ಷೇತ್ರಗಳಲ್ಲಿ ಅನೇಕ ಹರ್ಷಗಳು ದುಡಿದು ತ್ಯಾಗ ಮಾಡಿರುವ ಅನೇಕ ಜನರಿಗೆ ಪಾಶಾಸನ ಸಿಕ್ಕದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಯವರು).—

ಅ) ಮಾಹೆಯಾನ ರೂ ೧೫೦-೦೦

ಆ) ೧. ಸಾಹಿತ್ಯ, ಕಲೆ ಹಾಗೂ ಇತರೆ ರಂಗಗಳಲ್ಲಿ ಗಣನೀಯ ಸೇವೆ ಸಲ್ಲಿಸಿ ಕಷ್ಟ ಪರಿಸ್ಥಿತಿಯಲ್ಲಿರುವವರು ಮಾಸಾಶನ ಪಡೆಯಲು ಅರ್ಹರು.

೨. ಇವರ ವಯಸ್ಸು ೫೮ ವರ್ಷಕ್ಕಿಂತ ಕಡಿಮೆ ಇರಬಾರದು.

೩. ಆದಾಯ ವರ್ಷಕ್ಕೆ ರೂ ೧,೮೦೦-೦೦ ಒಳಗಿರಬೇಕು.

೪. ಅಂಗವಿಕಲ ಕಲಾವಿದರಿಗೆ ವಯಸ್ಸು ೪೦ ವರ್ಷಗಳಾಗಿದ್ದರೆ ಹಾಗೂ ೨೦ ವರ್ಷಗಳ ಸೇವೆ ಸಲ್ಲಿಸಿದ್ದರೆ ಮಾಸಾಶನ ಮಂಜೂರಾತಿಗೆ ಅರ್ಜಿಯನ್ನು ಪರಿಗಣಿಸಬಹುದಾಗಿದೆ.

ಇ) ಬಂದಿರುವುದಿಲ್ಲ.

ಜಮಖಂಡಿಯಲ್ಲಿ ಟಿ. ಬಿ. ಸೆಂಟರನ್ನು ತೆರೆಯುವ ಬಗ್ಗೆ

೫೩ (೧೫೩) ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ) —ಮಾನ್ಯ ಆರೋಗ್ಯ ಮತ್ತು ಆಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಜಮಖಂಡಿ ಮತ್ತು ಸುತ್ತಮುತ್ತಲಿನ ನಗರಗಳಲ್ಲಿ ಸಾವಿರಾರು ಬೀಡಿ ಕಾರ್ಮಿಕರಿರುವುದು ಜಮಖಂಡಿಯಲ್ಲಿ ಪ್ರತ್ಯೇಕವಾದ ಕ್ಷಯ ರೋಗ ಕೇಂದ್ರವನ್ನು ತೆರೆಯುವ ಅಲೋಚನೆ ಸರ್ಕಾರ ದವರಿಗಿದೆಯೇ ?

ಶ್ರೀ ಹೆಚ್.ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಬಿಜಾಪುರದಲ್ಲಿ ಈಗಾಗಲೇ ೧೧೦ ಹಾಸಿಗೆಗಳುಳ್ಳ ಒಂದು ಕ್ಷಯರೋಗ ಆಸ್ಪತ್ರೆ ಇದೆ. ಬೀಡಿ ಕಾರ್ಮಿಕರಿಗಾಗಿಯೇ ಈ ಆಸ್ಪತ್ರೆಯಲ್ಲಿ ೧೦ ಹಾಸಿಗೆಗಳನ್ನು ಕಾದಿರಿಸಲಾಗಿದೆ. ಆದ್ದರಿಂದ ಜಮಖಂಡಿಯಲ್ಲಿ ಪ್ರತ್ಯೇಕವಾದ ಕ್ಷಯ ರೋಗ ಕೇಂದ್ರವನ್ನು ತೆರೆಯುವ ಅಲೋಚನೆಯು ಸರಕಾರಕ್ಕಿಲ್ಲ.

ಇಲಾಖಾ ಸಲಹಾ ಸಮಿತಿಗಳ ಬಗ್ಗೆ

೫೪ (೧೧೮) ಶ್ರೀ ಬಾಬು ರೆಡ್ಡಿ ತುಂಗಳ್ (ಬೀಳಗಿ),—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಕಳೆದ ವರ್ಷ ಸರಕಾರದವರು ನಿಯಮಿಸಿದ ಇಲಾಖಾ ಸಲಹಾ ಸಮಿತಿಗಳು ಎಷ್ಟು ? (ವಿವರ ತಿಳಿಸುವುದು)

(ಆ) ನೇಮಕವಾದ ವಿವಿಧ ಸಲಹಾ ಸಮಿತಿಗಳು ಇಡೀ ವರ್ಷ ಕರೆದ ಸಭೆಗಳ ಸಂಖ್ಯೆ ಎಷ್ಟು?

(ಇ) ಹಾಗೆ ಕರೆಯದೇ ಇದ್ದಲ್ಲಿ ಅದಕ್ಕೆ ಕಾರಣಗಳೇನು?

(ಈ) ವರ್ಷದಲ್ಲಿ ಇಂತಿಷ್ಟು ಸಭೆ ಕರೆಯಬೇಕೆಂಬ ನಿಯಮವೇನಾದರೂ ಇದೆಯೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು)

(ಅ) ೨೬ (ಸಮಿತಿಯ ಹೆಸರುಗಳು ಅನುಬಂಧ ''ಅ'' ದಲ್ಲಿ ಇವೆ).

(ಆ) ೨೨.

(ಇ) ಉದ್ಭವಿಸುವುದಿಲ್ಲ.

(ಈ) ಇಲ್ಲ.